# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1272 |
| 2 | ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣ ಸ್ವಾಮಿ |
| 3 | ಉತ್ತರಿಸುವ ದಿನಾಂಕ | : | 21-12-2018 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿರುವ ಅಧಿಕೃತ ಜಾಹೀರಾತು ಫಲಕಗಳೆಷ್ಟು; | ಪ್ರಸ್ತುತ ಪಾಲಿಕೆಯ 8 ವಲಯಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳ ಪೈಕಿ ದಿನಾಂಕ:13.08.2018 ಮತ್ತು 15.08.2018ರ ಪತ್ರಿಕಾ ಪ್ರಕಟಣೆಯ ಸೂಚನೆಯಂತೆ 1,705 ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಅಧಿಕೃತವಿರುತ್ತವೆ. |
| ಆ) | ಬೆಂಗಳೂರು ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು 50000ಕ್ಕೂ ಹೆಚ್ಚು ಅನಧಿಕೃತ ಫಲಕಗಳು ರಾರಾಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿದೆಯೇ; | 2016-17ನೇ ಸಾಲಿನಲ್ಲಿ ಹೊಸದಾಗಿ ಸಮೀಕ್ಷೆ ನಡೆಸಿ, ದಾಖಲಿಸಿರುವ ಮಾಹಿತಿ ಪ್ರಕಾರ 2,454 ಅಧಿಕೃತ ಜಾಹೀರಾತು ಫಲಕಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುತ್ತವೆ.<br><br>ಈ ಮಧ್ಯೆ ಆಗಸ್ಟ್-2018ರಲ್ಲಿ ಮತ್ತೊಮ್ಮೆ ಹೋರ್ಡಿಂಗ್ಸ್ ಕ್ಯಾಪ್ಚರ್ ಆ್ಯಪ್ ಮುಖಾಂತರ ಸಮೀಕ್ಷೆ ನಡೆಸಿ, ದಾಖಲಿಸಿರುವ ಮಾಹಿತಿ ಪ್ರಕಾರ ಅಧಿಕೃತ/ಅನಧಿಕೃತ ಒಳಗೊಂಡಂತೆ 3,551 ಜಾಹೀರಾತು ಫಲಕಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುತ್ತವೆ. ಅವುಗಳ ಪೈಕಿ 1846 ಅನಧಿಕೃತ ಫಲಕಗಳೆಂದು ಪರಿಗಣಿಸಲಾಗಿದೆ. |
| ಇ) | ಇದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಗಿರುವ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ; | ಮಾನ್ಯ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸಿ ಪಾಲಿಕೆಗೆ ನಿರ್ದೇಶಿಸಿರುವ ಪ್ರಕಾರ ಕ್ರಮ ಸಂಖ್ಯೆ:3&4ರಲ್ಲಿ ವಿವರಿಸಿರುವಂತೆ ಪರಿಗಣಿಸಿರುವ 1,846 ಅನಧಿಕೃತ ಜಾಹೀರಾತು ಫಲಕಗಳ ಪೈಕಿ 1,342 ಜಾಹೀರಾತು ಫಲಕಗಳನ್ನು ಏಜೆನ್ಸಿದಾರರು/ ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುತ್ತಾರೆ. 290 ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ತೆರವುಗೊಳಿಸಿದ್ದು, ಉಳಿದಂತೆ 214 ಜಾಹೀರಾತು ಫಲಕಗಳಿಗೆ ವಿವಿಧ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಇರುವುದರಿಂದ ಪಾಲಿಕೆಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿರುವುದಿಲ್ಲ. |
| ಈ) | ಅನಧಿಕೃತ ಜಾಹೀರಾತು ಫಲಕಗಳನ್ನು ಗುರುತಿಸಿ, ಇನ್ನುಳಿದ ಅನಧಿಕೃತ ಜಾಹೀರಾತು ಫಲಕಗಳನ್ನು ಕೂಡಲೇ ತೆರವುಗೊಳಿಸ ಲಾಗುವುದೇ? | ಆಗಸ್ಟ್-2018ರಲ್ಲಿ ಮತ್ತೊಮ್ಮೆ ಹೋರ್ಡಿಂಗ್ಸ್ ಕ್ಯಾಪ್ಚರ್ ಆ್ಯಪ್ ಮುಖಾಂತರ ಸಮೀಕ್ಷೆ ನಡೆಸಿ, ದಾಖಲಿಸಿರುವ ಮಾಹಿತಿ ಪ್ರಕಾರ ಅಧಿಕೃತ/ಅನಧಿಕೃತ ಒಳಗೊಂಡಂತೆ 3,551 ಜಾಹೀರಾತು ಫಲಕಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುತ್ತವೆ. ಅವುಗಳ ಪೈಕಿ 1846 ಅನಧಿಕೃತ ಫಲಕಗಳನ್ನು ಗುರುತಿಸಲಾಗಿರುತ್ತದೆ. |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ:13.08.2018 ಮತ್ತು 15.08.2018 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ, ಬೆಂಗಳೂರು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಪಾಲಿಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾದ ಅನುಮತಿ ಪತ್ರ ಮತ್ತು ಇನ್ನಿತರೆ ಅವಶ್ಯ ದಾಖಲೆಗಳನ್ನು ನಿಗದಿತ ದಿನಾಂಕ:20.08.2018 ರೊಳಗಾಗಿ ಪಾಲಿಕೆಯ ಆಯಾ ವಲಯ ಜಂಟಿ ಆಯುಕ್ತರು ರವರ ಇ-ಮೇಲ್ ಐಡಿಗೆ ಅಥವಾ ಆಯಾ ವ್ಯಾಪ್ತಿ ಪ್ರದೇಶದ ಸಹಾಯಕ ಕಂದಾಯ ಅಧಿಕಾರಿರವರ ಕಛೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ದಿನಾಂಕ:30.08.2018ರೊಳಗೆ ಅಥವಾ ಮುಂಚಿತವಾಗಿ ಸದರಿ ಜಾಹೀರಾತು ಫಲಕಗಳನ್ನು ಸ್ವ-ಇಚ್ಛೆಯಿಂದ ತೆಗೆದುಹಾಕಲು ಸಾರ್ವಜನಿಕರಿಗೆ, ಜಾಹೀರಾತು ಸಂಸ್ಥೆ/ಸಂಘ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ.

ಆದರೂ ಸಹ ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸದ ಅನಧಿಕೃತ ಜಾಹೀರಾತು ಫಲಕಗಳನ್ನು ಸಂಪೂರ್ಣವಾಗಿ ತೆರವುಗೊಳಿಸದ ಕಾರಣ ದಿನಾಂಕ:01.09.2018 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಅನಧಿಕೃತ ಜಾಹೀರಾತು ಫಲಕಗಳನ್ನು ದಿನಾಂಕ:06.09.2018 ರೊಳಗಾಗಿ ಸ್ವ-ಇಚ್ಛೆಯಿಂದ ತೆಗೆದುಹಾಕಲು ಕಾಲವಕಾಶ ನೀಡಲಾಗಿದೆ. ತಪ್ಪಿದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾನೂನು ರೀತ್ಯಾ ಕ್ರಮಕೈಗೊಳ್ಳುತ್ತದೆ. ಮತ್ತು ಆಯಾ ವ್ಯಾಪ್ತಿಯ ಪೊಲೀಸರ ನೆರವುಪಡೆದು ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ತೆರವುಗೊಳಿಸಲಾಗುವುದು ಅಲ್ಲದೆ ತಪ್ಪಿತಸ್ಥ ವ್ಯಕ್ತಿಗಳ/ ಏಜೆನ್ಸಿಗಳ/ಸಂಸ್ಥೆಗಳ ವಿರುದ್ಧ ಸೂಕ್ತ ಕಾನೂನಾತ್ಮಕ ಕ್ರಮಕೈಗೊಳ್ಳಲಾಗುತ್ತದೆಂದು ಅಂತಿಮ ಸೂಚನೆ ನೀಡಲಾಗಿರುತ್ತದೆ.

ಸದರಿ ಸೂಚನೆಯಂತೆ ಹೋರ್ಡಿಂಗ್ಸ್ ಕ್ಯಾಪ್ಚರ್ ಆ್ಯಪ್ ಮುಖಾಂತರ ದಾಖಲಿಸಿರುವ 3,551 ಜಾಹೀರಾತು ಫಲಕಗಳ ಪೈಕಿ 1,705 ಜಾಹೀರಾತು ಫಲಕಗಳಿಗೆ ಸಂಬಂಧಿಸಿ ದಾಖಲೆಗಳು ಸಲ್ಲಿಸಿಕೆಯಾಗಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಕಳೆದ 2 ವರ್ಷಗಳಿಂದ ಯಾವುದೇ ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ನವೀಕರಿಸದೇ ಇರುವುದರಿಂದ ಈ ಎಲ್ಲಾ ಜಾಹೀರಾತುಗಳು ಅನಧಿಕೃತವಾಗಿರುತ್ತವೆಂದು ಪಾಲಿಕೆಯ ಜಂಟಿ ಆಯುಕ್ತರುಗಳು ತೀರ್ಮ ನೀಡಿ ಆದೇಶಗಳನ್ನು ಹೊರಡಿಸಿರುತ್ತದೆ.

ಸಂಖ್ಯೆ: ನಅಇ 660 ಎಂಎನ್‌ಯು 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು